# ನವರಾತ್ರಿ

ಹಬ್ಬಗಳ ತವರೂರಾದ ಭಾರತ ದೇಶದಲ್ಲಿ 'ನವರಾತ್ರಿ' ಅಥವಾ 'ದಸರಾ' ಹಬ್ಬಕ್ಕೆ ತನ್ನದೇ ಆದ ಮಹತ್ವ, ಪೌರಾಣಿಕ ಹಿನ್ನೆಲೆ ಇದೆ. ಭಾರತಾದ್ಯಂತ 'ದಸರಾ' ಹಬ್ಬವನ್ನು ತುಂಬಾ ಉತ್ಸಾಹದಿಂದ ವಿಜೃಂಭಣೆಯಿಂದ ಆಚರಿಸುತ್ತಾರೆ.ಪ.ಬಂಗಾಳದಲ್ಲಿ 9 ದಿನಗಳಲ್ಲಿ ದುರ್ಗಾದೇವಿಯ ವಿಶಾಲವಾದ ಸುಂದರ ಮೂರ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ, ಅಲಂಕೃತ ಮಂಟಪಗಳಲ್ಲಿ ಕೂರಿಸಿ, ಪೂಜಿಸಲಾಗುತ್ತದೆ. ವಿಜಯದಶಮಿಯ ದಿನ ಭವ್ಯ ಮೆರವಣಿಗೆಯ ಮೂಲಕ ವಿಸರ್ಜಿಸಲಾಗುತ್ತದೆ. ಇದು ಬಂಗಾಳಿಯವರಿಗೆ ನಾಡಹಬ್ಬವಾಗಿದೆ.ಪಂಜಾಬದಲ್ಲಿ ಭಕ್ತರು 7 ದಿನಗಳ ಉಪವಾಸ ಮಾಡಿದ ನಂತರ ಎಂಟನೇ ದಿನ ಪುಟ್ಟ ಬಾಲಿಕೆಯರನ್ನು ದೇವಿಯರ ಪ್ರತಿರೂಪವೆಂದು ಭಾವಿಸಿ ಅವರಿಗೆ ಪುರಿ, ಹಲವಾ ಮತ್ತು ಕಡಲೆಯ ನೈವೇದ್ಯ ನೀಡುತ್ತಾರೆ. ಹೊಸ ಕೆಂಪು ಬಣ್ಣದ 'ಚುನ್ನಿ'ಗಳನ್ನು ಕಾಣಿಕೆಯಾಗಿ ನೀಡುತ್ತಾರೆ.ಗುಜರಾತ ಮತ್ತು ರಾಜಸ್ತಾನ ಕೆಲವು ಪ್ರಾಂತಗಳಲ್ಲಿ ನವರಾತ್ರಿಯ ಸಮಯದಲ್ಲಿ ದಾಂಡಿಯ, ಗರ್ಬಾ ಲೋಕನೃತ್ಯವು ಪ್ರಸಿದ್ಧವಾಗಿದೆ. 'ಧೋತಿ–ಕುರ್ತಾ ಮತ್ತು ಚನಿಯಾ–ಚೋಲಿ' ವಿಶೇಷ ಉಡುಪುಗಳನ್ನು ಧರಿಸಿ, ಢೋಲಕ ವಾದ್ಯದ ತಾಳದಲ್ಲಿ 'ಗಾರ್ಬಿ' (ಅಶಾಂತಿ, ಅಂಧಕಾರ ದುರಮಾಡಿ ಜ್ಞಾನದ ಬೇಳಕು ಕೊಡುವ) ಎಂಬ ಸಣ್ಣ ದೀಪದ ಸುತ್ತಲು ಮಾಡುವ ಈ ನೃತ್ಯ ನೋಡಲು ಅತಿಸುಂದರವಾಗಿರುತ್ತದೆ. ಕರ್ನಾಟಕ, ಆಂಧ್ರ ಮತ್ತು ತಮಿಳನಾಡನಲ್ಲಿ ದಸರಾ ಹಬ್ಬವು ಪಾರಂಪಾರಿಕ ರೀತಿಯಲ್ಲಿ ಆಚರಿಸಲಾಗುತ್ತದೆ. ಸುಮಂಗಳೆಯರು ಮನೆಯಲ್ಲಿ ಗೊಂಬೆಗಳನ್ನು ಅಲಂಕರಿಸಿ ಇಟ್ಟು ಪೂಜಿಸುತ್ತಾರೆ. ರಂಗೋಲಿ ಪುಷ್ಪಗಳ ಅಲಂಕಾರವು ವಿಶೇಷವಾಗಿರುತ್ತದೆ. ಅನೇಕರನ್ನು ಕರೆಸಿ ಅವರಿಗೆ ಅರಿಶಿಣ ಕುಂಕಮ ನೀಡಿ ಪ್ರಸಾದ ಕೊಡುತ್ತಾರೆ. ಮೈಸೂರಿನಲ್ಲಿ ವೈವಿಧ್ಯಮಯತೆಯಿಂದ ಈ ಹಬ್ಬವನ್ನು ಭವ್ಯವಾಗಿ ಆಚರಿಸುವ ಪರಂಪರೆ ಇದೆ. ಜಂಬೂಸವಾರಿ, ದೀಪಾಲಂಕಾರ, ಸಾಂಸ್ಕೃತಿಕ ಕಾರ್ಯಕ್ರಮಗಳಿಂದ 10 ದಿನಗಳಕಾಲ ನಡೆಯುವ ದಸರಾ ಮಹೋತ್ಸವ ನೋಡಲು ಅತಿ ಮನೋಹರವಾಗಿರುತ್ತದೆ.

ಈ ಹಬ್ಬವು ಅಶ್ವಿಜ ಮಾಸದ ಬಹುಳ ಪಾಡ್ಯಮಿಯಿಂದ ಪ್ರಾರಂಭವಾಗಿ ವಿಜಯದಶಮಿಯಂದು ಕೊನೆಗೊಳ್ಳುತ್ತದೆ. ಈ ಮಧ್ಯೆ ಬರುವ ಸಪ್ತಮಿ, ಅಷ್ಟಮಿ, ನವಮಿ ಹಾಗೂ ದಶಮಿಗಳಲ್ಲಿ ವಿಶೇಷ ಪೂಜೆಯೂ ನಡೆಯುತ್ತದೆ. ದುರ್ಗಾಷ್ಟಮಿಗೆ ಶಕ್ತಿಪೂಜೆ, ಮಹಾನವಮಿಯಂದು ಸರಸ್ವತಿ ಪೂಜೆ, ಆಯುಧ ಪೂಜೆ ವಿಜಯದಶಮಿಯಂದು 'ಬನ್ನಿ' ಪೂಜೆಯನ್ನು ಮಾಡುತ್ತಾರೆ. ನವರಾತ್ರಿಯ ಹಿಂದಿನ ದಿನವಾದ ಮಹಾಲಯ ಅಮಾವಾಸ್ಯೆ. ಅಮಾವಾಸ್ಯೆ ಎಂದರೆ ಕತ್ತಲು, ಈ ಕತ್ತಲಿನಲ್ಲೂ ಮಹಾ+ಲಯ, ಮಹಾ ವಿನಾಶ ಅಂದರೆ ಮಹಾನ್ ಪರಿವರ್ತನೆ ಆಗುವುದು. ಆ ದಿನ, ಗತಿಸಿದ ಸರ್ವ ಪಿತೃಗಳಿಗೆ ತರ್ಪಣ ಹಾಗೂ ಭಕ್ಷ, ಭೋಜನಾದಿಗಳನ್ನು ಮಾಡಿ ಅರ್ಪಿಸುತ್ತಾರೆ. ಆದರಿಂದ ಈ ದಿನಕ್ಕೆ ಸರ್ವಪಿತೃ ಅಮಾವಾಸ್ಯೆ ಎಂದೂ ಕರೆಯುತ್ತಾರೆ. ವಿಜಯದಶಮಿಯ ದಿನದಂದು ಶಮಿಪೂಜೆಯೆಂದು ಬನ್ನಿಮರಕ್ಕೆ ಪೂಜಿಸುವರು. 'ಶಮಿ' ಎಂದರೆ ಶಾಂತಿ, ಸಮಾಧಾನವೆಂದರ್ಥ. ಆ ದಿನ ಬನ್ನಿ ಮರಕ್ಕೆ ಪೂಜಿಸುವುದರರೊಂದಿಗೆ ಬನ್ನಿಮರದ ಎಲೆಗಳನ್ನು ಪರಸ್ಪರ ಕೊಟ್ಟು ಶುಭ ಹಾರೈಸುತ್ತಾರೆ. 'ಬನ್ನಿ' ಎಂಬ ಶಬ್ದವೇ ಸ್ವಾಗತ ಶಬ್ದಾರ್ಥವಾಗಿರುವದರಿಂದ ತಮ್ಮ ಆಪ್ತಸ್ನೇಹಿತರಿಗೆಲ್ಲ ನಿಮಂತ್ರಣ ನೀಡಿ ಸಿಹಿ ಹಂಚುತ್ತಾರೆ. ಹೊಲಗಳಲ್ಲಿ ಬೆಳೆದ ಜೋಳದ, ಗೋಧಿಯ ಹುಲ್ಲನ್ನು ಅರ್ಥಾತ್ ಶಾಂತಿಯ ಸಂಕೇತವಾದ ಹಸಿರನ್ನು ಪೂಜಿಸುತ್ತಾರೆ. ವಿಜಯದಶಮಿ ಶಾಂತಿ, ಸಮಾಧಾನ ನೀಡುವ ಹಬ್ಬವಾಗಿದೆ.

ಉತ್ತರ ಭಾರತದಲ್ಲಿ ದಸರಾ ಹಬ್ಬದ ಪ್ರಯುಕ್ತ 'ರಾಮಲೀಲ' ಬೀದಿನಾಟಕ ಹಾಗೂ ರಾವಣ ವಿಭಿಷಣ ಹಾಗೂ ಕುಂಭಕರ್ಣರ ದೊಡ್ಡ ಗೊಂಬಗಳನ್ನು ಮಾಡಿ ಸುಡುವುದು ಪ್ರಚಲಿತವಾಗಿದೆ. ರಾವಣ ಸಂಹಾರದ ಪ್ರತೀಕವಾಗಿ 'ವಿಜಯ ದಶಮಿ' ಆಚರಿಸುತ್ತಾರೆ. ರಾವಣ ನಮ್ಮ ಶತ್ರು ಆದರಿಂದಲೇ ಅವನ ಸಂಹಾರ ಮಾಡುತ್ತಾರೆ. ರಾವಣ ಲಂಕಾಧಿಪತಿ, ಅವನು ಬಹಳ ಶಕ್ತಿಶಾಲಿ, ಜಲ, ವಾಯು, ಅಗ್ನಿ, ಆಕಾಶ ಮತ್ತು ಕಾಲಗಳು ಅವನ ಬಂಧನದಲ್ಲಿ ಇದ್ದವು ಎಂದು ಜನಸಾಮಾನ್ಯರು ಹೇಳುತ್ತಾರೆ. ರಾವಣ ಯಾರು? ಅವನನ್ನು ಏಕೆ ಪ್ರತಿವರ್ಷ ಸುಟ್ಟು ಹಾಕುತ್ತಾರೆ? ರಾವಣ ಎಂದರೆ ರಾಕ್ಷಸಿ ಪ್ರವೃತ್ತಿಯ ಸಂಕೇತ. ರಾವಣನ ಹತ್ತು ತಲೆಗಳು, ಸ್ತ್ರೀಯಲ್ಲಿರುವ ಪಂಚವಿಕಾರಗಳಾದ ಮತ್ತು ಪುರುಷರಲ್ಲಿರುವ ಪಂಚವಿಕಾರಗಳಾದ ಕಾಮ, ಕ್ರೋಧ, ಮೋಹ, ಲೋಭ, ಅಹಂಕಾರಗಳು. ನಮ್ಮಲ್ಲಿರುವ ಈ ಪಂಚ ವಿಕಾರಗಳನ್ನು ಸುಟ್ಟು ಹಾಕಿದರೆ ನಿಜವಾದ ದಶಹರಾ, ಅಂದರೆ ರಾವಣನ ಸಂಹಾರವಾಗುವುದು. ನವರಾತ್ರೆ ವಿಶೇಷವಾಗಿ ದೇವಿಯರ ಆರಾಧನೆ, ಪೂಜೆಯು ನಡೆಯುತ್ತದೆ. ದುರ್ಗಾದೇವಿಯ 8 ಭುಜಗಳು ಮುಖ್ಯ 8 ಶಕ್ತಿಯ ಪ್ರತಿಕವಾಗಿದೆ. ಸಹನಶಕ್ತಿ, ಅಳವಡಿಸಿಕೊಳ್ಳುವ ಶಕ್ತಿ, ಪರಿಕ್ಷಿಸಿಕೊಳ್ಳುವ ಶಕ್ತಿ, ನಿಣರ್ಯ ಶಕ್ತಿ, ಧೈರ್ಯ ಶಕ್ತಿ, ಸಹಯೋಗ ಶಕ್ತಿ, ಸಂಕುಚಿತಗೊಳಿಸುವ ಶಕ್ತಿ, ಮತ್ತು ಸಂಕ್ಷಿಪ್ತಗೊಳಿಸುವ ಶಕ್ತಿಗಳು, ದೈವಿ ಗುಣಗಳಾದ ಶಾಂತಿ, ಪ್ರೀತಿ ಸ್ನೇಹ, ಮಧುರತೆ, ಆನಂದ, ನೀರಾಕಾರ ಪರಮಪಿತ ಶಿವ ಪರಮಾತ್ಮನು, ಈಶ್ವರೀಯ ವಿಶ್ವವಿದ್ಯಾಲಯದ ಮುಲಕ ಕಲಿಸುವ ರಾಜಯೋಗದಿಂದ ಧಾರಣೆ ಮಾಡಬಹುದು. ಅದರಿಂದ ನಾವೂ ದೇವಮಾನವರಾಗಬಹುದು.

ಹಾಗಾದರೆ ಬನ್ನಿ, ನಾವು ಈ ದಸರಾ ಹಬ್ಬದ ಆಧ್ಯಾತ್ಮಿಕ ಹಿನ್ನಲೆಯನ್ನು ತಿಳಿದು, ವಿಶ್ವಪಿತನಾದ ನಿರಾಕಾರ ಭಗವಂತನ ಮಕ್ಕಳು ಎಂದು, ಪರಸ್ಪರದಲ್ಲಿ ಸ್ನೇಹ ಆತ್ಮೀಯತೆಯನ್ನು ಬೆಳೆಸಿ, ವಿಶ್ವಶಾಂತಿಯ ಉಗಮಕ್ಕೆ ನಾಂದಿಯನ್ನು ಹಾಡಿ, ಉತ್ಸಾಹದಿಂದ ಆಚರಿಸೋಣ.

-----**ವಿಶ್ವಮೋಹಿನಿ. ಧಾರವಾಡ** .